**ಸಾಕ್ಷಿಯನ್ನು ಇಂದು ದಿನಾಂಕ 11.07.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎನ್. ಆರ್. ಪ್ರತಿವಾದಿ ಪರ ವಕೀಲರಿಂದ**

ಬಿಚ್ಚಯ್ಯ ತಾತ ಇರುತ್ತಾನೆ. ಬಿಚ್ಚಯ್ಯರವರಿಗೆ 4 ಜನ ಮಕ್ಕಳು ಎಂದರೆ ಸರಿ. ಅವರ ಹೆಸರುಗಳು ನಂದಮ್ಮ, ಬಸ್ನಯ್ಯ, ಗದ್ದಿಗಯ್ಯ ಮತ್ತು ಸರಸ್ವತಿ. ನಂದಮ್ಮಗೆ 4 ಜನ ಮಕ್ಕಳು. ಸರಸ್ವತಿ, ಶಿವರುದ್ರಮ್ಮ, ಶ್ರೀಶೈಲಯ್ಯ ಮತ್ತು ಮಲ್ಲಯ್ಯ ಎಂದರೆ ಸರಿ. ಸದರಿ ದಾವೆಯಲ್ಲಿ ಶ್ರೀಶೈಲಯ್ಯನವರನ್ನು ಬಿಟ್ಟರೆ ಬೇರೆ ಯಾರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಬಿಚ್ಚಯ್ಯರವರ ಮಗ ಬಸ್ನಯ್ಯ ಎಂದರೆ ಸರಿ. ಬಸ್ನಯ್ಯರವರಿಗೆ ನಿರ್ಮಲಾ, ನಾಗಯ್ಯ ಮತ್ತು ಬಿಚ್ಚಯ್ಯ ನಾವು 3 ಜನ ಮಕ್ಕಳು ಎಂದರೆ ಸರಿ. ನಿರ್ಮಲಾ ಮತ್ತು ನಾಗಯ್ಯರವರನ್ನು ಸದರಿ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಬಿಚ್ಚಯ್ಯರವರು 1960ರ ನಂತರ ತೀರಿಹೋಗಿದ್ದಾರೆ ಆದರೆ ನಿಖರವಾಗಿ ಹೇಳಲು ಬರುವುದಿಲ್ಲ. ಬಿಚ್ಚಯ್ಯ ರವರು ತೀರಿ ಹೋದಾಗ ಸರಸ್ವತಿಯವರ ಮದುವೆ ಆಗಿರಲಿಲ್ಲ ಎಂದರೆ ಸರಿ. ಸರಸ್ವತಿಯವರಿಗೆ ಕಣ್ಣು ಕಾಣಿಸುತ್ತಿರಲಿಲ್ಲ ಎಂದರೆ ಸರಿ. ಸರಸ್ವತಿಯವರನ್ನು ಯಾರು ಮದುವೆ ಆಗಿಲ್ಲ ಎಂಬ ಕಾರಣದಿಂದ ನಂದಮ್ಮ ರವರ ಪತಿಗೆ ಮದುವೆ ಮಾಡಿಕೊಡಲಾಗಿತ್ತು ಎಂದರೆ ಸರಿ. ಸರಸ್ವತಿ ಮದುವೆಯಾದ ನಂತರ ಪಾಲ ಆಗಿತ್ತು ಎಂದರೆ ಸರಿಯಲ್ಲ. ಸರಸ್ವತಿಯವರ ಮದುವೆ ನಿಖರವಾಗಿ ಯಾವ ವರ್ಷ ಆಗಿತ್ತು ಎಂದು ನನಗೆ ಹೇಳಲು ಬರುವುದಿಲ್ಲ. ಅವರ ಮದುವೆಯಾದಾಗ ನಾನು ಚಿಕ್ಕವನಿದ್ದೆ. ತಾತ ತೀರಿಹೋದ ನಂತರ ಆಸ್ತಿ ಪಾಲು ಆಗಿತ್ತು ಎಂದರೆ ಸರಿ. ತಾತ ತೀರಿಹೋದ ನಂತರ ಆಸ್ತಿಯಲ್ಲಿ 4 ಜನರಿಗೆ ಹಕ್ಕು ಬಂತು ಎಂದರೆ ಸರಿ. ಸರಸ್ವತಿಯವರ ಮದುವೆಯಾದ ನಂತರ ಪಾಲು ಆಗಿತ್ತು ಎಂದರೆ ಸರಿಯಲ್ಲ. ಯಾವ ವರ್ಷ ಪಾಲು ಆಗಿತ್ತು ಎಂದು ನನಗೆ ಗೊತ್ತಿಲ್ಲ. ಪಾಲು ಆಗುವ ಸಮಯಕ್ಕೆ ನಂದಮ್ಮ ಮತ್ತು ಸರಸ್ವತಿ ಇಬ್ಬರಿಗೂ ದಾವಾ ಆಸ್ತಿ ಕೊಟ್ಟಿದ್ದು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸರಸ್ವತಿಯವರಿಗೆ ಪಾಲು ಕೊಟ್ಟಿತ್ತು ಎಂದು ನುಡಿಯುತ್ತಾರೆ. ಪಾಲು ಆದಾಗ ನಾನು ಚಿಕ್ಕವನಿದ್ದ ಕಾರಣ ನನಗೆ ಗೊತ್ತಿಲ್ಲ ಎಂದರೆ ಸರಿ. ಸರಸ್ವತಿ ಒಬ್ಬರಿಗೆ ಪಾಲು ಕೊಟ್ಟಿತ್ತು, ಈಗ ಅವರಿಗೆ ಪಾಲು ಕೊಡಬೇಕಾಗುತ್ತದೆ ಎಂಬ ದುರದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇದರಲ್ಲಿ ಎಲ್ಲರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಆದ್ದರಿಂದ ದಾವಾ ನಡೆಯುವುದಿಲ್ಲ ಎಂದರೆ ಸರಿಯಲ್ಲ. ಸರಸ್ವತಿಯವರಿಗೆ ಕಣ್ಣು ಕಾಣದ ಕಾರಣ ಸದರಿ ದಾವಾ ಸ್ವತ್ತು ಅವರ ಹೆಸರನ್ನು ನಾಮಿನಲಿ ಮಾಡಲಾಗಿತ್ತು ಎಂದರೆ ಸರಿಯಲ್ಲ. ನಂತರ ಯಾವಾಗ ತೀರಿಹೋಗಿದ್ದಾರೆ ನನಗೆ ಗೊತ್ತಿಲ್ಲ. ಸರಸ್ವತಿಯವರು ತೀರಿಹೋಗುವ ಮುನ್ನ ನಂದಮ್ಮ ತೀರಿಹೋಗಿದ್ದರು ಎಂದರೆ ಸರಿ. 09.05.2018ರಂದು ಸರಸ್ವತಿ ರವರ ಜೀವಿತಾಅವಧಿಯಲ್ಲಿ ವಿಲು ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆಸ್ಪತ್ರೆಗೆ ಹೋಗುವಾಗ ಅವರಿಗೆ ಕಣ್ಣು ಕಾಣದ ಕಾರಣ ಅವರ ಕಡೆಯಿಂದ ಸಹಿ ಮಾಡಿಸಿಕೊಂಡಿರುತ್ತಾರೆ. ಸರಸ್ವತಿಯವರು ಅವರ ಗಂಡನ ಮನೆಯಲ್ಲಿ

ತೀರಿಹೋಗಿದ್ದರು ಎಂದರೆ ಸರಿ. ಶ್ರೀಶೈಲರವರಗೆ ಸರಸ್ವತಿಯವರನ್ನು ನೋಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸರಸ್ವತಿಯವರು ನಮ್ಮ ಊರಿನಲ್ಲಿ ಇದ್ದರು ಎಂಬುದನ್ನು ಯಾವುದೇ ಸಾಕ್ಷಾದಾರುಗಳು ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದ ಆಧಾರ ಕಾರ್ಡ ಮತ್ತು ಓಟರ್ ಐಡಿ ಇದೆ ಎಂದು ನುಡಿಯುತ್ತಾರೆ. ಸರಸ್ವತಿಯವರು ಸ್ವತಃ ತಾವಾಗಿಯೇ ವಕೀಲರ ಬಳಿ ಹೋಗಿ ವಿಲು ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಖಾಲಿ ಕಾಗದಕ್ಕೆ ಸಹಿ ಮಾಡು ಎಂದ ಕಾರಣ ಸಹಿ ಮಾಡಿರುತ್ತಾರೆ. ಸಹಿ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅವರ ಸಹಿ ಮಾಡುವ ಕಾಲಕ್ಕೆ ನಾನು ಇರಲಿಲ್ಲ. ಅವರಿಗೆ ಸಹಿ ಮಾಡು ಎಂಬ ಕಾರಣ ಸಹಿ ಮಾಡಿದ್ದಾರೆ ಎಂದು ಯಾವ ಆಧಾರದ ಮೇಲೆ ಹೇಳುತ್ತಿದ್ದೇನೆ ಎಂದು ನನಗೆ ಗೊತ್ತಿಲ್ಲ. ವಿಲು ಮಾಡಿದ್ದರು ಮಾಡಿಲ್ಲ ಎಂದು, ಅವರ ಪಾಲು ಹೋಗಬಾರದು ಎಂಬ ಕಾರಣದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವರು ದುಡಿದು ವಿಲ ಮಾಡಿದ್ದನ್ನು ಶ್ರೀಶೈಲರವರು ದುರುಪಯೋಗ ಪಡಿಸಿಕೊಂಡು ವಿಲು ಮಾಡಿಕೊಂಡಿರುವ ಮಾತು ಸರಿಯಲ್ಲ. ನಂದಮ್ಮ ಮತ್ತು ಸರಸ್ವತಿಯವರಿಗೆ ಜಂಟಿಯಾಗಿ ಕೊಟ್ಟ ದಾವಾ ಸ್ವತದಲ್ಲಿ ಅವರು ಜಂಟಿ ಕಬ್ಜೆಯಲ್ಲಿ ಇದ್ದರು ಎಂದರೆ ಸರಿಯಲ್ಲ. ಮ್ಯೂಟೇಷನ ಆಗುವ ಸಮಯಕ್ಕೆ ವಿಲಡಿಡ್ ಆಗಿರುವ ವಿಚಾರ ಗೊತ್ತಿದ್ದರು ನಾನು ಯಾವುದೇ ತಕರಾರು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಮತ್ತು ಮಲ್ಲಯ್ಯ ರವರು ತಕರಾರು ಸಲ್ಲಿಸಿರುತ್ತಾರೆ. ಮಲ್ಲಯ್ಯರವರು ಒಪ್ಪಿಗೆಯ ಮೇರೆಗೆ ಶ್ರೀಶೈಲಯ್ಯರವರ ಹೆಸರಿನಲ್ಲಿ ಮ್ಯೂಟೇಷನ ಆಗಿದೆ ಎಂದರೆ ಸರಿಯಲ್ಲ. ಎಲ್ಲಾ ಗೊತ್ತಿದ್ದರೂ ಗೊತ್ತಿಲ್ಲ ಎಂದು ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.
ಸಹಿ/-
ಪ್ರ. ದ. ನ್ಯಾ ದಂ. ಸೇಡಂ.

*SYH*